ಅಂತ ಗೌಡ್ರು ಗದರಿದರು. 'ಜೀವ ಹೋದ್ರೂ ಸರಿ ನುಗ್ಗೋದೆಯಾ ಬರ್ರಲೆ' ಅಂದ್ನೋ ಇಲ್ಲೋ ಸಿದ್ದೇಶಿ, ನಮ್ಮೋರು ನುಗ್ಗಿದರು. ಹಳ್ಳಿ ಜನವೂ ಅಡ್ಡ ನಿಂತರು. ತಳ್ಳಾಟವಾತು. ಅದೆಲ್ಲಿತ್ತೋ ಪೊಲೀಸ್ ವ್ಯಾನ್, ಶಬ್ದ ಮಾಡ್ತಾ ಇಳ್ಕಂತೆ! ಕುಂಟಿಗ್ಗಂತ ನಾನು ಗುಂಪಿನಿಂದ ದೂರ ಹೋಗಿ ನಿಂತೆ, ವ್ಯಾನ್‌ನಿಂದ ದಬದಬನೆ ಇಳಿದ ಪೊಲೀಸಪ್ಪಗಳು ಮೈಮ್ಯಾಗೆ ದೆವ್ವ ಬಂದೋರಂಗೆ ಲಾಠಿ ಬೀಸಿ ಕೈಗೆ ಸಿಕ್ಕೋರನೆಲ್ಲಾ ವ್ಯಾನ್‌ನಾಗೆ ತುಂಬ್ಕಂಡು ಗೋಡ್ರಿಗೆ ಒಂದು ಜಬರದಸ್ತ್ ಸೆಲ್ಯೂಟ್ ಹೊಡ್ಡಿ ಹೊಂಟೇ ಹೋದರು.

ಹಟ್ಟಿಗೆ ಬಂದೆ. ನಮ್ಮೋರೆಲ್ಲಾ ನನ್ನ ಮುತ್ಕಂಡರು. ನಡೆದಿದ್ದರ ವರದಿ ಒಪ್ಪಿಸಿದೆ. 'ಅವನು ಸಿದ್ದೇಶಿ ಅಂಬೋನು. ಸರಿಗಿಲ್ಲ, ರಾಜಕೀಯದೋನು. ಅವನೂವೆ ಯಲಕ್ಷನ್ಗೆ ನಿಂತ್ಕಂಬೋನಿದಾನೆ, ಮಾ ಸ್ವಾರ್ಥಿ ನಮ್ಮ ಹಟ್ಟಿ ಹುಡುಗರ್ನ ಹಾಳು ಮಾಡ್ತಾನಷ್ಟೆ' ಅಂತ ತೀರ್ಪು ಕೊಟ್ಟರು ಹಟ್ಟಿಜನ.

'ಹಂಗಲ್ರಪ್ಪಾ, ಸಿದ್ದೇಶಿ ಹೇಳೋದ್ರಾಗೂ ಅರ್ಥ ಐತೆ. ಹಿಂಗೇ ಆಗೋದ್ರೆ ನಮ್ಗೆ ಸಮಾನತೆ ಸಿಗೋದು ಯಾವಾಗ್ರ?', ತಿಳಿಹೇಳ್ದೆ.

'ಅದೆಲ್ಲಾ ಹಾಳಾಗೋಗ್ಲಿ. ನಮ್ಮ ಹುಡ್ರುನ್ನ ಬಿಡಿಸ್ಕೊಂಡು ಬರೋದು ಯಾರಣ್ಣಾ ಟೇಸನ್ನಿಂದ?' ಹಟ್ಟಿ ಜನ ಅಲವತ್ತಕೊಂಡರು. 'ಸಿದ್ದೇಶಿ ಏನಾದರ ಮಾಡ್ತಾನೆ ಅಂಜಬ್ಯಾಡ್ರಿ' ಅಂತಂದು ಹಟ್ಟಿಜನಕ್ಕೆ ಹೇಳ್ತಾ ನನಗೆ ನಾನೇಯಾ ಧೈರ್ಯ ತಂದ್ಕೊಂಡೆ.

'ಸಿದ್ದೇಶಯಲಕ್ಷನ್ನಿಗೆ ಈ ಊರಿಂದ್ಲೆ ನಿಲ್ಲೋನದಾನೆ ಕಣೋ ಕುಂಟ ಕಲ್ಲಪ್ಪ, ಅದ್ಕೆ ಹಂಗಾಡ್ಲಿಕತ್ತಾನೆ. ನೀನ್ಯಾಕೆ ಅವನ ಕಡೆ ಕೋಲ್ಲುಹೊಯ್ತಿ? ಕುಂಟಂಗೆ ಎಂಟು ಚೇಷ್ಟೆ ಅಂತೆ' ಅಂತಂದು ನನ್ನ ಮ್ಯಾಗೂ ಸಿಟ್ಟಾದರು ಹಟ್ಟಿ ಜನ. ಏನು ಮಾಡಲೂ ತೋಚದೆ ತಲೆಮ್ಯಾಗೆ ಕೈ ಹೊತ್ತು ಕುಂತೆವು. ಪೊಲೀಸರು ಹಳ್ಳಿಯ ದೊಡ್ಡ ಜನರ್ನೂ ಎತ್ತಾಕ್ಕಂಡು ಹೋದ ತಾಜಾ ಸುದ್ದಿನೂ ಹಟ್ಟಿ ಜನಕ್ಕೆ ಹೇಳಿ ದೊಡ್ಡ ಉಸಿರು ಬಿಟ್ಟೆ.

* * *

ಹಳ್ಳಿ ಅರಳಿಕಟ್ಟೆ ಮ್ಯಾಗೆ ಸುತ್ತು ಮಂದಿ ಕುಂತ್ಕಂಡಿತ್ತು, ಹಳ್ಳಿಜನ ಭಯಭೀತರಾಗಿದ್ರೂವೆ ಗೌಡ ಮಾತ್ರ ಮೀಸೆಯಡಿ ನಕ್ಕುಂಡೆ ಇದ್ದ. 'ನಮ್ಮ ಕೆಳ ಹಟ್ಟಿಜನ ಎಂದೂ ಹಿಂಗ್ ಮಾಡ್ದೋರಲ್ಲ. ಬಡವ ನೀನು ಮಡಗಿದಂಗಿರು ಅನ್ನಂಗೆ ಇದ್ದರು. ಇವರ್ಗೆಲ್ಲಾ ನಮ್ಮ ಗುಡಿ ಪ್ರವೇಶ ಮಾಡೋ ಖಯಾಲಿ ಬಂತಾರಾ ಯಾಕೆ? ಪೊಲೀಸ್‌ರು ನಮ್ಮ ಹಳ್ಳಿಕೆ ಎಂದೂ ಕಾಲು ಇಕ್ಕಿದೋರಲ್ಲ, ಕೆಳಹಟ್ಟಿ ಜನಕ್ಕೆ ಇದ್ದಕ್ಕಿದ್ದಂಗೆ ಇಂಥ ಧಿಮಾಕು ಯಾಕೆ ಬಂದಿದ್ದಾತು' ಅಂತೆಲ್ಲಾ ಊರ ಪಟೇಲ ಪರಪರನೆ ತಲೆ ಕೆರೆದ. ಇದಕ್ಕೆಲ್ಲಾ ಸಿಟಿ ಸಿದ್ದೇಶಿನೇ ಕಾರಣವಂತ ಮಾತಾಡಿ ಎಲ್ಲರೂ ಒಂದು ತೀರ್ಮಾನಕ್ಕೆ ಬಂದರು.

'ಸಿಟಿನಾಗೆ ಚಳವಳಿ ಸತ್ಯಾಗ್ರಹ ಅಂತ ಮಾಡ್ಕೊಂಡು ಸಿದ್ದೇಶ ರಾಜಕೀಯದೋರ್ನ ಬಗಲ್ನಾಗಿಟ್ಕಂಡಷ್ಟೆ ಕಣ್ರಲ್ಲಾ' ಅಂದರು ಗೌಡ್ರು.

'ಯಾರ್ನೂ ಮೇಟ್ ಮಾಡೋರಲ್ಲ ನೀವು. ದಲಿತರು ಗುಡಿಪರವೇಸ ಮಾಡ್ತಾರೆಂಬ ಸುಳಿವು ಸಿಗುತ್ಲೂವೆ ಒಂದ್ಕಡೆ ಕಣಿಗೆ ಮುಚ್ಚು ರೆಡಿ ಮಾಡ್ಕೊಂಡು, ಇನ್ನೊಂದು ಕಡೆ ಪೊಲೀಸ್‌ನೋರ್ಗೂ ಸುದ್ದಿ ಮುಟ್ಟಿಸಿ ಬರೋಹಂಗೆ ಮಾಡಿದ್ರಿ. ನಮ್ಮ ಗೌಡ್ರ ಮರ್ಮನೆ ತಿಳಿಯಂಗಿತ್ರಿಲೆ' ಅಂತ ಹಳ್ಳಿ ಜನರ ಎದ್ರುನಾಗೆ ಗೌಡರನ್ನು ಕೊಂಡಾಡಿ ಖುಷಿಪಡಿಸಿದ ಪಟೇಲ ಮಾತು ಮುಂದುವರೆಸಿದ. 'ನಮ್ಮ ಗೌಡ್ರು ಒಂದು ಕಣ್‌ಸನ್ನೆ ಮಾಡುತ್ಲಾ ಮಚ್ಚು ಕುಡಗೋಲು ಹೆಂಗೆ ಹಾರಾಡಿದು! ಹಟ್ಟಿ ಹುಡುಗರು ಕೈಕಾಲು ಮುರ್‍ಕೊಂಡು ರಕ್ತ ಚೆಲ್ಲಾಡ್ತು. ಆಮ್ಯಾಗ್ಲೂ ಗೌಡ್ರು ಸುಮ್ಗೆ ಕುಂತ್ಕಂಡಾರಾ? ಪೊಲೀಸ್ ಟೇಸನ್ನೊಗೇ ಹೋಗಿ ರೊಕ್ಕ ಬಿಸಾಕಿ ನಮ್ಮ ಹಳ್ಳಿ ಜನರನ್ನು ಬಿಡಿಸ್ಕೊಂಡು ಬಂದರು. ಅದು ಗೌಡ್ರಿಗಿರೋ ತಾಕತ್ತು' ಎಂದು ಗುಣಗಾನ ಮಾಡಿದ ಪಟೇಲ. 'ಬಿಡ್ಲಾಲೆ ಪಟೇಲಾ, ಸಿದ್ದೇಶನೂ ಹಟ್ಟಿ ಹೈಕಳ್ನ ಬಿಡಿಸ್ಕೊಂಡು ಬಂದವನಂತಲ್ಲಲಾ' ಶಾನುಭೋಗ ಹೊಟ್ಟೆ ಉರ್‍ಕೊಂಡ.

'ಆಲ್ ಗೋಡ್ರೆ, ಆ ಸಿದ್ದೇಶಿ ಅಪ್ಪ ಅಮ್ಮನಗಾರ ತಾವು ವಸಿ ಬುದ್ದಿ ಹೇಳಬಾರದಾ?' ಅಲವತ್ತುಕೊಂಡ ಶಾನುಭೋಗ.

'ಹೇಳ್ದಂಗೆ ಇರ್ತಿನೇನ್ಲಾ ಶಾನುಭೋಗಾ. ಅವರಂತಾರೆ, ನಮ್ಮ ಮಗ ನಮ್ಮ ಮಾತೆಲ್ಲಿ ಕೇಳ್ತಾನೆ ಶಿವಾ. ಸತ್ರುವೇ ಮಗನಾಗಿ ಹುಟ್ಟಿದ್ನೆ ಅಂತ ಗೋಳೋ ಅಂತ ಬಾರಾಡಿ ಅತ್ತು' ಅಂದರು ಗೌಡ್ರು.

'ಅದೆಲ್ಲಾ ನಂಗೆ ಗೊತ್ತಿಲ್ಲ ಸ್ವಾಮಿ. ಕೆಳಹಟ್ಟಿಯೋರು ಗುಡಿಯೊಳಗೆ ಕಾಲಿಟ್ಟರೆ ನಾನು ನೇಣು ಹಾಕ್ಕಂಡು ಸಾಯ್ತಿನಷ್ಟೆಯಾ' ಶಾನುಭೋಗ ಜಿದ್ದಿಗೆ ಬಿದ್ದು ವಲ್ಲಿನಾಗೆ ಕಣ್ಣೊರೆಸಿಕೊಂಡ. 'ಗೋಡ್ರೆ, ಹಿಂದಕ್ಕೆ ಒಂದೆಪ್ ಕೆಳಹಟ್ಟಿಗೆ ಬೆಂಕಿ ಇಕ್ಕಸಿದ್ರಲ್ಲಾ ಹಂಗೆ ಇಕ್ಕಿಸಿ ಬಿಡ್ರಿ. ಬಂದು ನಿಮ್ಮ ಪಾದ ಹಿಡಿತಾವೆ' ಪಟೇಲ ಹುರಿದುಂಬಿಸಿದ.

'ಅದೆಲ್ಲಾ ಹತ್ತು ವರಸದ ಹಿಂದಿನ ಮಾತು ಕಣ್ಲಾ ಪಟೇಲಾ. ಈಗ ಕಾಲ ಬದಲಾಗದೆ. ಕಾನೂನುಕಟ್ಲೆ ಅವರ ಪರವಾಗವೆ. ನಾವಾಗಿ ಕೆರ್‍ದು ಹುಣ್ಣು ಮಾಡ್ಕೊಬಾರ್ದು. ಒಟ್ಟಿನಾಗೆ ಅವರು ಗುಡಿ ಪ್ರವೇಶ ಮಾಡ್ದಂಗೆ ಮಾಡ್ಬೇಕು, ಅಷ್ಟೆ ತಾನೆ?', ಗೌಡ ಮೀಸೆ ತಿರುವಿದ.

'ಅಲ್ರಿ ಗೋಡ್ರೆ, ಅವರ್ಗೆ ಅಂತ್ಲೆ ಮಾರವ್ವ ಮಾದೇಶನ ಗುಡಿಗಳವಲ್ಲ, ನಮ್ಮ ನರಸಿಂಹನ ತಂತ್ಯಾಕೆ ಇವಕ್ಕೆ? ಇದಕ್ಕೇನಾರ ಮಾಡಿ ಅವರ ಸ್ಥಾನಮಾನ ಏನು? ನೀವೇನು ಅಂತ ತೋರಿಸಿ ಕೊಡ್ಲೇಬೇಕು ಮಾ ಸ್ವಾಮಿ' ಅಂತ ಶಾನುಭೋಗ ಹಳ್ಳಕ್ಕೆ ಬಿದ್ದು, ಒಂದುಗತಿ ಕಾಣ್ಸೆ ಅಂತ್ಲೂ ಸೇರಿಸಿದ.

* * *

ಸಿದ್ದೇಶಿನೂ ಸುಮ್ನೆ ಕೂರೋ ಆ ಸಾಮಿಯಂತೂ ಅಲ್ಲ, ಹಟ್ಟಿಯೋರ್ನ ಊರಜನದ ಮೇಲೆ ಎತ್ತಕಟ್ಟಿದ, 'ನಾವು ಹೆದರ್ಕಂಡ್ರೆ ಹೆದರಿಸ್ತಾ ಕಣ್ರಲೆ, ಆದ್ದಾಗಲಿ ಗುಡಿ ಪ್ರವೇಶದವಾ ಬಿಡ್ಲಿ. ಸಾಲು ಹೆಣ ಬೀಳ್ಲಿ ಅಂಜೋಮಾತೇ ಇಲ್ಲ, ಸಿಟಿಯಿಂದ ನಮ್ಮ ಶಾಸಕರನ್ನು ನಮ್ಮ ಪಕ್ಷದವರನ್ನು ಕರೆಸ್ತೀನಿ. ಅವರೆಲ್ಲಾ ಬಂದ್ರೆ ಪೊಲೀಸ್‌ರೂ ಪ್ರೊಟಕ್ಷನ್ಗೆ



ಬಂದೇ ಬರ್ತಾರೆ. ಕಾನೂನಿಗಿಂತ ಯಾವನೂ ದೊಡ್ಡೋನಲ್ಲ, ಏನಾತದೋ ನೋಡೇ ಬಿಡೋಣ. ಇದು ನಮ್ಮ ಹಟ್ಟಿ ಮಾರ್ವಾದೆ ಪ್ರಶ್ನೆ' ಎಂದು ಹಟ್ಟಿ ಜನಗಳ್ನ ಮಳ್ಳು ಮಾಡ್ದ. ಏನೆಂತಿಯಾ ಕುಂಟ ಕಲ್ಲಪ್ಪ? ಅಂತಂದು ನನ್ನೊ ಕೇಳಿ ನನ್ನ ವಜನ್ನೂ ಹೆಚ್ಚಿಸಿದ.

'ನಮ್ಮ ಹಟ್ಟಿ ಜನ ನೀವು ಹೆಂಗೆ ಹೇಳಿದ್ರಂಗೆ ಸಿದ್ದೇಶಣ್ಣಾ' ಅಂತ ಗೋಣು ಆಡಿಸಿದೆ. ಮಿಡ್ಲಿಸ್ಕೂಲನಾಗೆ ನಾನವನ ಕ್ಲಾಸ್‌ಮೆಂಟ್, ಹಂಗಾಗಿ ನಾನಂದ್ರವನಿಗೆ ರವಷ್ಟು ಹೆಚ್ಚೇ ಗೆಳತನ. ಸಿಟಿಗೋಗಿ ನಮ್ಮ ಮಾದಿಗ ದಂಡೋರದ ಹುಡ್ರನ್ನ ಕರೆದು ಬರ್ತೀನಿ. ತಹಶೀಲ್ದಾರ್ನೂ ಹಿಡಿತೀನಿ. ದೊಡ್ಡದಾಗಿ ಪಂಕ್ಷನ್ ಮಾಡಿ ಗುಡಿ ಪ್ರವೇಶ ಮಾಡೋಣ. ಅದ್ಯಾವನು ತಡಿತಾನೋ ನೋಡೀಯೇ ಬಿಡೋಣ, ಎಂದು ಗರಂ ಆದ.

ಸಿಟಿಗೆ ಹೋದವನ್ನೆ ಸಿದ್ದೇಶ್ ಎಲ್ಡೇ ದಿನಕ್ಕೆ ಪೇಟೆ